

ಕಲಬುರ್ಗಿಯಲ್ಲಿ ನಡೆಯುವ ಐತಿಹಾಸಿಕ ಸೂಫಿ ಸಂತ ಖ್ವಾಜಾ ಬಂದೇ ನವಾಜರ ಉರುಸ್‌ನ ಸಂದಲ್ (ಗಂಧ)ಮೆರವಣಿಗೆಯ ಒಂದು ನೋಟ ಚಿತ್ರ: ಪ್ರಶಾಂತ್ ಎಚ್.ಜಿ.

## ಉರುಸು ಎನ್ನಿ..

ಜಾತ್ರೆ ಎಂಬುದು ಭಾರತೀಯ ಸಂಸ್ಕೃತಿಯ ಜನಭಾಷೆಯ ಪದ. ಉರುಸು ಎನ್ನಿ. ಅದಕ್ಕೆ ವಿಶಿಷ್ಟ ಧಾರ್ಮಿಕ ಚಹರೆಯೊಂದು ಪ್ರಾಪ್ತವಾಗುತ್ತದೆ. ಅದೂ ಭಾರತೀಯವೇ.

ನಮ್ಮ ನಾಡಿನ ಅತ್ಯಂತ ಹಿಂದುಳಿದ ತಾಲ್ಲೂಕಾದ ಯಾದಗಿರಿಯಿಂದ ಹಿಡಿದು ರಾಜಧಾನಿ ಬೆಂಗಳೂರಿನವರೆಗೆ ಉರುಸುಗಳು ಹೊರಸೂಸುವ ಪರಿಮಳ ಅನನ್ಯ. ಉರುಸುಗಳು ಗಂಧದ ಮೆರವಣಿಗೆಗೆ ಪ್ರಸಿದ್ಧ ಎಂಬುದನ್ನು ಯಾರಾದರೂ ಮರೆತಾರೆಯೇ?

ಹಿಂದೂ ಮುಸ್ಲಿಂ ಭಾವೈಕ್ಯದ ಸಂಕೇತಗಳಂತಿರುವ ದರ್ಗಾಗಳೇ ಉರುಸುಗಳ ತಪ್ಪಲುಗಳು. ಭಾವೈಕ್ಯತೆ ಸಭೆಗಳು, ಕುರಾನ್ ಪಠಣ ಜೊತೆಗೊಂದು ದೀಢ್ ನಮಸ್ಕಾರ. ಉರುಸುಗಳಲ್ಲಿ ಹೆಚ್ಚಿಗೆ ಪಾಲ್ಗೊಳ್ಳುವವರಾದರೂ ಯಾರು? ಹಿಂದೂಗಳೇ. ಮೊಹರಂ ಉತ್ಸವಗಳೂ ಭಾವೈಕ್ಯದ ಪ್ರತಿಪಾದಿಗಳೇ. ಅಲ್ಲಿಯೂ ಜನಜಾತ್ರೆ.

ರಸ್ತೆ ಪಕ್ಕದಲ್ಲೇ ಜಾಗ. ಅದೃಷ್ಟವಿದ್ದರೆ ತಗಡು ಹೊದಿಸಿದ ಗೋಡೆಗಳು. ಅದಕ್ಕೊಂದು ಬಲವಿಲ್ಲದ ಬೀಗ! ತೇರ ಬುಡದಲ್ಲಿ ಕೆಲವೊಮ್ಮೆ ನಾಯಿ, ಕೋತಿ ಹಿಂಡುಗಳ ಸಂಸಾರ.

ಈ ನಡುವೆ, ತೇರುಗಳಿಗೆ ಈಗ ಕೋಟಿಗಳ ಮೌಲ್ಯವು ಬಂದಿದೆ. ಕೊಟ್ಟೂರಿನಲ್ಲಿ ಎರಡು ವರ್ಷದ ಹಿಂದೆ ತೇರು ಉರುಳಿ ಬಿದ್ದ ಬಳಿಕ ಹೊಸ ತೇರಿಗೆ ಸುಮಾರು ಎರಡೂವರೆ ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ಸುತ್ತೂರಿನಲ್ಲೂ ಎರಡು ಕೋಟಿ ರೂಪಾಯಿ ವೆಚ್ಚದಲ್ಲಿ ಹೊಸ ತೇರು ಕಟ್ಟಲಾಗಿದೆ.

### ದನಗಳ ಜಾತ್ರೆಗೆ ಜಿಎಸ್‌ಟಿ ಇಲ್ಲ!

ಹೌದು. ಜಾತ್ರೆಯೆಂದರೆ ಜನಗಳ ಜಾತ್ರೆಯಷ್ಟೇ ಅಲ್ಲ. ದನಗಳ ಜಾತ್ರೆಯೂ ಹೌದು. ಜಾತ್ರೆ ಒಂದು ವ್ಯಾಪಾರೀ ಚಟುವಟಿಕೆಯ ತವರು. ಜಾಗತೀಕರಣದ ಭರಾಟೆಯಲ್ಲಿ ಈ ತವರು ಶ್ರೀಮಂತವಾಗಿಬಿಟ್ಟಿದೆ.

ಕರುನಾಡಿನಲ್ಲಿ ನಡೆಯುವ ಬಹುತೇಕ ಜಾತ್ರೆಗಳಲ್ಲಿ ದನಗಳ ಮಾರಾಟದಿಂದ ಕೋಟ್ಯಂತರ ರೂಪಾಯಿ ವಹಿವಾಟೂ ಸದ್ದಿಲ್ಲದೆ ನಡೆದುಹೋಗುತ್ತದೆ. ಒಂದು ಟವಲಿನ ಕೆಳಗೆ ಕೊಳ್ಳುವವನು ಮತ್ತು ಮಾರುವವನ ಕೈಗಳು ಮಾತಾಡಿಕೊಳ್ಳುತ್ತವೆ. ವ್ಯವಹಾರ ಕುದುರಿದರೆ ಕೈಗಳು ಕುಲುಕಿಕೊಳ್ಳುತ್ತವೆ. ಇಲ್ಲದಿದ್ದರೆ ಟವಲಿಗೆ ಯಾವ ಮರ್ಯಾದೆಯೂ ಇರುವುದಿಲ್ಲ. ಅಂದ ಹಾಗೆ ಅಲ್ಲಿ ಯಾವ ಜಿಎಸ್‌ಟಿಯೂ ಇರುವುದಿಲ್ಲ.

ಮುಳಬಾಗಲಿನ ಆವಣಿಯಲ್ಲಿ ನಡೆಯುವ ದನಗಳ ಜಾತ್ರೆಯನ್ನು ನೋಡಿದವರಿಗೆ ದೊಡ್ಡಬಳ್ಳಾಪುರದ ಘಾಟಿ ಜಾತ್ರೆ ಚಿಕ್ಕದು ಎನ್ನಿಸುತ್ತದೆ. ಧಾರ್ಮಿಕ ಕ್ಷೇತ್ರವಾಗಿ ಗಮನ ಸೆಳೆದಿರುವ ಘಾಟಿ ಸುಬ್ರಹ್ಮಣ್ಯ, ತನ್ನ ಸುತ್ತಲಿನ ಸರಳ ಪ್ರಕೃತಿ ಸೌಂದರ್ಯದಿಂದಲೂ ಗಮನ ಸೆಳೆಯುತ್ತದೆ. ವರ್ಷಕ್ಕೊಮ್ಮೆ ನಡೆಯುವ ದನಗಳ ಜಾತ್ರೆ ಘಾಟಿ ಸುಬ್ರಹ್ಮಣ್ಯದಷ್ಟೇ ಹೆಸರುವಾಸಿ.

### ಗದ್ದುಗೆ, ಮಠಗಳ ಜಾತ್ರೆ

ಅಪ್ಪಟ ಗ್ರಾಮದೇವತೆಗಳಿಗೆ ಗದ್ದುಗೆಗಳು ಕಡಿಮೆ. ಮಠಗಳೂ ಕಡಿಮೆ. ಆದರೆ ಗದ್ದುಗೆ, ಮಠ ಸೌಕರ್ಯಗಳನ್ನು ಹೊಂದಿರುವ ಸಿದ್ಧಪುರುಷರು, ಪವಾಡ ಪುರುಷರ ಗದ್ದುಗೆಗಳು ಹಾಗೂ ಮಠಗಳು ರಾಜ್ಯದಲ್ಲಿ ಜಾತ್ರೆಗಳ ಕೇಂದ್ರಸ್ಥಾನಗಳಾಗಿ ಪರಿವರ್ತನೆ ಹೊಂದಿರುವುದನ್ನು ಗಮನಿಸಲೇಬೇಕು. ಈ ಸಿದ್ಧಪುರುಷರೆಲ್ಲರೂ ಹೇಳಲು ಹೆಸರಿಲ್ಲದ ಹಳ್ಳಿಗಳಿಂದಲೇ ನಡೆದು ಬಂದು ನೆಲೆಗೊಂಡವರು ಎಂಬುದನ್ನು ಮರೆಯಬಾರದು.

ಬಳ್ಳಾರಿಯ ಅಲ್ಲೀಪುರದ ಮಹದೇವ ತಾತನ ಜಾತ್ರೆ, ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆ, ಕೊಳ್ಳೇಗಾಲ ತಾಲ್ಲೂಕಿನ ಮಲೆಮಹದೇಶ್ವರ ಜಾತ್ರೆ, ಮಂಟೇಸ್ವಾಮಿ ಪರಂಪರೆಯನ್ನು ಪ್ರತಿನಿಧಿಸುವ ಚಿಕ್ಕಲ್ಲೂರು ಜಾತ್ರೆ, ಕೊಟ್ಟೂರಿನ ಕೊಟ್ಟೂರೇಶ್ವರ ಜಾತ್ರೆ ಇವೆಲ್ಲವೂ ಸಿದ್ಧಪುರುಷರ ಹೆಸರಲ್ಲಿ ನಡೆಯುವ ಜಾತ್ರೆಗಳು. ಮೈಸೂರು ಭಾಗದ ಕುರುಬನ ಕಟ್ಟೆ, ಮುದ್ದುಲೆ, ಮಲೆಮಹದೇಶ್ವರ ಬೆಟ್ಟ, ಹೊಂಡರಬಾಳು, ಕುಂತೂರು, ಹರಳೆಯಲ್ಲಿ ಗದ್ದಿಗೆಗಳಲ್ಲೇ ಜಾತ್ರೆಗಳು ನಡೆಯುತ್ತವೆ.



ಚಾಮರಾಜನಗರ ಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ ಮಹದೇಶ್ವರ ಬೆಟ್ಟದಲ್ಲಿ ನಡೆಯುವ ಮಲೆಮಹದೇಶ್ವರಸ್ವಾಮಿಯ ದೀಪಾವಳಿ ರಥೋತ್ಸವದ ಸೊಬಗು